ಕತೆ

# ಹಿಂಬಾಗಿಲು

**ಉಮಾಶಂಕರ ಎಚ್.ಡಿ.**

ಕಲೆ: ಆದಿತ್ಯ ಸದಾಶಿವ್

‘ಸಿದ್ಧಣ್ಣ ಮತ್ತು ಕಮಲಕ್ಕನ್ನ ನಾ ನೋಡ್ದೆ’ ಎಂದು ಮನೆಗೆ ಬಂದಿದ್ದ ಶಂಭಣ್ಣ ಹೇಳಿದ್ದರಿಂದ ನನ್ನ ಮನಸ್ಸು ಇಪ್ಪತ್ತು ವರ್ಷದ ಹಿಂದಕ್ಕೆ ಜಿಗಿಯಿತು. ನಾನಾಗ ಎಂಟನೇ ತರಗತಿ. ಅಣ್ಣ ಪಿಯುಸಿ. ಕನಕಪುರದ ಹಾಸ್ಟೆಲ್‌ನಲ್ಲಿದ್ದನು. ಆಗ ನಮ್ಮ ಕೇರಿಗೆ ನಿತ್ಯ ಸಿದ್ಧಣ್ಣ ಬರುತ್ತಿದ್ದನು. ಬಂದವನು ಗುಟ್ಟಾಗಿ ಅವ್ವನೊಂದಿಗೆ ಅದೇನೋ ಮಾತಾಡಿ ಹೋಗುತ್ತಿದ್ದನು. ಅಲ್ಲೇ ಆಟವಾಡುತ್ತಿದ್ದ ನನ್ನನ್ನು ‘ಸರೋಜ’ ಎಂದು ಕರೆದು, ‘ಇವ್ಳು ನನ್ ತಂಗಿ... ಸುಂದ್ರಿ’ ಎಂದು ಕೆನ್ನೆ ಕಿತ್ತು ಮುತ್ತಿಡುತ್ತಿದ್ದನು. ಹೀಗಿರುವಾಗ ಒಂದು ದಿನ ಹಾಸ್ಟೆಲ್‌ನಿಂದ ಅಣ್ಣ ಬಂದನು. ಬಂದವನೇ ಅವ್ವನೊಂದಿಗೆ ತಗಾದೆ ಶುರುಮಾಡಿದನು. ‘ನಿಂಗ್ಯಾಕೆ ಬೇಕು ಈ ಉಸಾಬರಿ.. ಆ ಸಿದ್ಧಣ್ಣ ಗೌಡ್ರ ಕಮಲಕ್ಕನ ಇಟ್ಕೊಂಡಿದಾನಂತೆ, ಇದಕ್ಕೆಲ್ಲ ನೀನೇ ಸಹಾಯ ಮಾಡ್ತೀಯಂತೆ... ಊರವರೆಲ್ಲ ಹಂಗೇ ಮಾತಾಡ್ತಾವರೆ’ ಎಂದನು. ಎಂದೂ ಈ ತರಹದ ಮಾತಾಡದ ಅವನ ಮಾತು ಅವ್ವನಿಗೆ ದಿಗಿಲು ಹುಟ್ಟಿಸಿತು. ಆದರೂ ಸಾವರಿಸಿಕೊಂಡು, ‘ಹೋಗೋಗೋ ಅವ್ರವ್ರ ಸಂಬಂಧ ಅವರಪ್ರಿಗೆ.. ಸಿದ್ಧಣ್ಣ ಬತ್ತನೆ ಏನೋ ಕಷ್ಟ ಸುಖ ಏಳ್ಕೊತಾನೆ, ಅಷ್ಟೆ. ಅದ್ಕೆ ಇಲ್ಲಸಲ್ಲದ್ದು ಅನ್ಕೊತಾರೆ... ಅವರೇಳ್ಬಿಟ್ರು ಇವ್ನು ಬಂದ್ಬಿಟ್ಟ’ ಎಂದು ಅವ್ವನೂ ತಿರುಗಿಸಿ ಬಾರಿಸಿದಂತೆ ಹೇಳಿದಳು. ಅಣ್ಣ ಗೊಣಗುತ್ತ ಸುಮ್ಮನಾದನು. ಓದುತ್ತಿರುವ ಮಗ ಹಿಂಗೆ ಕೇಳಿದ್ನಲ್ಲ ಅಂತೇಳಿ ಅವ್ವ ಚಿಂತಿತಳಾದಳು. ಇಲ್ಲಿಂದೀಚೆಗೆ ನಾನೂ ಕೊಂಚ ಹೆಚ್ಚೇ ಗಮನಿಸುತ್ತಾ ಹೋದೆ.

ಕಮಲಕ್ಕ ಹೊಲಗೇರಿಗೆ ಅಂಟಿಕೊಂಡಿದ್ದ ಒಕ್ಕಲಗೇರಿಯ ಸಣ್ಣಯ್ಯನ ಹೆಂಡತಿ. ಕಮಲಕ್ಕನ ಅವ್ವ ಜಯಮ್ಮನವರು ಗಂಡ ಸತ್ತ ಮೇಲೆ ತನ್ನ ಮಗಳನ್ನು ತನ್ನ ತಮ್ಮನಿಗೆ ಮದುವೆ ಮಾಡಿಕೊಟ್ಟು ಅಲ್ಲೇ ಇರಿಸಿಕೊಂಡಿದ್ದರು. ದೊಡ್ಡದಾದ ತೊಟ್ಟಿ ಹಟ್ಟಿ, ಹತ್ತಾರೆಕೆರೆ ಹೊಲ, ಹತ್ತು ವಾಡೆ ಗುಡಾಣ ತುಂಬ ದವಸ ಧಾನ್ಯ, ತೊಟ್ಟಿಯ ಪಕ್ಕದ ಹಜಾರದಲ್ಲಿ ಸೂರಿನ ತನಕ ರಾಶಿ ಬಿದ್ದಿರುವ ತುಂಬಿದ ಮೂಟೆಗಳು, ನಿತ್ಯ ಓಡಾಡುವ ಹತ್ತಾರು ಆಳುಕಾಳು, ಹಲವು ದನಕರುಗಳು ಆ ಮನೆಯ ಸುಖ ಸಂಸಾರದ ಕತೆಯನ್ನು ಹೇಳುತ್ತಿದ್ದವು. ಈ ಮನೆಯ ಹಿಂದಿನ ಬಾಗಿಲು ತೆರೆದರೆ ನಮ್ಮನೆಯ ಮುಂದಿನ ಬಾಗಿಲು ಕಾಣುತ್ತಿತ್ತು. ಅಲ್ಲೇ ಕಮಲಕ್ಕ ಅವ್ವನನ್ನು ಕರೆದು ಏನನ್ನಾದರು ಹೇಳುತ್ತಿದ್ದಳು. ಹಬ್ಬ ಹರಿದಿನಗಳಲ್ಲಿ ಊಟವನ್ನು ಕೊಡುತ್ತಿದ್ದಳು. ಕಷ್ಟ ಸುಖಕ್ಕೆ ಆತುಕೊಳ್ಳುತ್ತಿದ್ದಳು.

ಕೆಲವೊಮ್ಮೆ ಕಮಲಕ್ಕ ಸೀದಾ ಹಿತ್ತಲ ಬಾಗಿಲಿನಿಂದ ನಮ್ಮನೆಗೆ ಬಂದು ಅವ್ವನೊಡನೆ ಗಂಟೆಗಟ್ಟಲೆ ಕೂರುತ್ತಿದ್ದಳು. ಒಮ್ಮೊಮ್ಮೆ ಅಳುತ್ತಿದ್ದಳು. ನಗುತ್ತಿದ್ದಳು. ಒಮ್ಮೊಮ್ಮೆ ಬಿಕ್ಕಳಿಸುತ್ತಾ ಹೊರಟುಹೋಗುತ್ತಿದ್ದಳು. ಸ್ವಲ್ಪ ಉದ್ದವಾದ ದೇಹ, ಸಣ್ಣನೆಯ ನಡು, ಎಣ್ಣೆಗಂಪು ಬಣ್ಣ, ಸದಾ ಬಾಚಿರುವ ತಲೆಗೂದಲು, ಗಿಣಿ ಮೂಗು, ಅದನ್ನು ಆವರಿಸಿರುವ ದೊಡ್ಡದಾದ ಮೂಗುತಿ, ಕಿವಿ ತುಂಬಾ ಓಲೆಗಳು, ಅಗಲವಾದ ಹಣೆಬೊಟ್ಟು ಇವೆಲ್ಲದರಿಂದ ಕಮಲಕ್ಕ ಎರಡು ಮಕ್ಕಳ ತಾಯಾಗಿದ್ದರೂ